Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೨೮ —

ಸತ್ಯವಾದಿ
SATYAVADI

ಸಂಪಾದಕರು— ಅರಮನೆ ಸಿಂಪ್ಲೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೆ

30—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ."

ಗೋಸಂರಕ್ಷಣೆ ಮಾಡಿ

ಕೊಟ್ಟ ಸಾಲ ಕೊಡಬೇಕಾಗಿಲ್ಲ

ಬರ್ಮಾದಲ್ಲಿ ಮಸೂದೆ ಬರಲಿದೆ

ಬರ್ಮಾ ಪಾರ್ಲಿಮೆಂಟಿನಲ್ಲಿ ಬರುವ ತಿಂಗಳು ಹೆಚ್ಟ್ ಮಾಂಟೋರಿಯಂ ಮತ್ತು ಕಿಲೀಫ್ ಬಿಲ್ಲನ್ನು ಸರ್ಕಾರ ಮಂಡಿಸುವದಾಗಿ ಬರ್ಮಾ ಪ್ರಧಾನಿಯು ನೂ ರಂಗೂನಿನಲ್ಲಿ ತಿಳಿಸಿದರು. ಸಾಲಗಾರನೋರ್ವನು ಸಾಲದಲ್ಲಿ ನಿರ್ದಿಷ್ಟ ಭಾಗವನ್ನು ತೀರಿಸಿದ್ದರೆ, ಪೂರ್ಣ ಸಾಲ ತೀರಿಸಿದಂತೆ ಆಯಿತು ಎಂಬುದು ಮಸೂದೆಯ ತತ್ವ.

ಚೀನಾ ಬಗ್ಗೆ ಡಾಂಗೆ

ಕಾನ್ಪುರದಲ್ಲಿ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಎಸ್. ಎ ಡಾಂಗೆ ಯವರು ಭಾಷಣ ಮಾಡುತ್ತಾ, ಚೀನ ವಶದಲ್ಲಿರುವ ಭೂವಿಯನ್ನು ಭಾರತ ವಾಪಸು ಪಡೆಯುವದು ಎಂದರು

ರಕ್ಷಣೆ ಮುಖ್ಯ

ಭಾರತ ಹಾಗೂ ಪಾಕಿಸ್ತಾನ ರಕ್ಷಣೆ ಅವಿಭಾಜ್ಯವೆಂದು ಅಮೆರಿಕ ಅಧ್ಯಕ್ಷ ಕೆನಡಿಯ ವಿಶೇಷ ಸಲಹೆಗಾರ ಡಾ|| ಕೆ ಸಿಂಗರ್ ಕರಾಚಿಯಲ್ಲಿ ತಿಳಿಸಿದರು

ಹಿಂದಿ ಮಾಧ್ಯಮ

ಭಾರತ ವಿಶ್ವವಿದ್ಯಾನಿಲಯಗಳಲ್ಲೆಲ್ಲ ಹಿಂದಿ ಮಾಧ್ಯಮವನ್ನು ಜಾರಿಗೆ ತರುವದು ಸರ್ಕಾರದ ನೀತಿಗೆ ಸಂಬಂಧಿಸಿದ್ದು ಉತ್ತರ ಪ್ರದೇಶದ ಮಾಜಿ ಮುಖ್ಯ ಮಂತ್ರಿ ಡಾ|| ಸಂಪೂರ್ಣಾನಂದರು ಲಕ್ನೋನಲ್ಲಿ ತಿಳಿಸಿದರು

ಚಿನ್ನ ಪತ್ತೆ

ಬಾಂಕಾಂಕಿನಿಂದ ಬೊಂಬಾಯಿಗೆ ಆಗಮಿಸಿದ ಚೀನೀಯನಿಂದ ರೂ 2 ಲಕ್ಷ ಬೆಲೆಯ ಅಕ್ರಮ ಸಾಗಾಣಿಕೆ ಚಿನ್ನ ವನ್ನು ಕಸ್ಟಂಸಿನವರು ವಶಮಾಡಿಕೊಂಡರು

ಉಪವಾಸ ವ್ರತ

ವಯೂನ್ಗಿನಲ್ಲಿ ಪಾಲಿಟೆಕ್ನಿಕ್ ಸಂಸ್ಥಾಪಿಸುವದಂಲ್ಲಿ ಸರ್ಕಾರ ವಿಫಲವಾಗಿದೆಯೆಂದು ಅಲ್ಲಿನ ಪಂಚಾಯ್ತಿ ಸಮಿತಿ ಅಧ್ಯಕ್ಷ ಶ್ರೀ ವಿ ರಾಮುರಾವ್ ಮತ್ತಿ ತರ 5 ಮಂದಿ ಉಪವಾಸ ಹೂಡಿರುವರು

ಕಾಂಗೋ ಚರ್ಚೆ

ಕಾಂಗೋ ಬಗ್ಗೆ ವಿಶ್ವಭದ್ರತಾ ಸಮಿತಿ ಈ ದಿನ ಚರ್ಚಿಸುವದು.

ಸಂಧಾನ ಸಾಧ್ಯವಿಲ್ಲ

ಡಚ್ ನ್ಯೂಗಿನಿ ಮೇಲೆ ಇಂಡೋನೇಷಿಯಾ ತನ್ನ ಪೂರ್ವಭಾವಿ ಸಕ್ಕನ್ನು ಒತ್ತಾಯ ಮಾಡುವ ವರಿಗೆ ದ್ವಿಪಕ್ಷೀಯ ಇರಿಯರ್ ಬಗ್ಗೆ ಸಂಧಾನ ಸಾಧ್ಯವಿಲ್ಲವೆಂದು ಪದಾಗಿ ವಾಷಿಂಗ್ಟನ್ನಿನಲ್ಲಿಂದ ಹಾಲೆಂಡಿನ ರಾಯಭಾರಿ ಶ್ರೀ ಜೋಹಾನ್ ಹೇಗ್‌ನಲ್ಲಿ ತಿಳಿಸಿದ್ದಾರೆ

ಓಟರಿಗೆ ಸಿಹಿ

ಕಾಂಗ್ರೆಸಿನ ಚುನಾವಣೆ ಪ್ರಚಾರದ ಅಂಗವಾಗಿ ಪ್ರತಿಓಟು ದಾನಿಗೂ ಸಿಹಿ ಹಂಚುವ ವ್ಯವಸ್ಥೆಯಾಗಿದೆ ಎಂದು ಬೆಂಗಳೂರಿನಿಂದ ವರದಿ ಬಂದಿದೆ.

ಪ್ರವೇಶವಿಲ್ಲ

ಘಾನಾದಲ್ಲಿ ಸ್ಥಾನಬದ್ಧ ಶಾಸನ ಯಾವ ರೀತಿ ಕೆಲಸ ಮಾಡಿತಿದೆ ಎಂಬುದನ್ನು ಪರಿಶೀಲಿಸಲು ಅಂತರರಾಷ್ಟ್ರೀಯ ನ್ಯಾಯ ವಾದಿಗಳ ಸವಿತಿಯು ಶ್ರೀ ರಾಮ ಪ್ರಸಾದ ಮುಖರ್ಜಿಯವರಿಗೆ ಘಾನಾ ಪ್ರವೇಶಿಸಲು ಅವಕಾಶ ದೊರೆಯಲಿಲ್ಲ

೦೦

ಇಂಡೋನೇಷಿಯಾ ರಷ್ಯದಿಂದ ಹೆಚ್ಚಾಗಿ ಆಯುಧ ಕೊಳ್ಳಲಿದೆ

ಜಜ್ಜಿಹೋಗಿ ಮರಣ

ಕಾಲಾವಾಂಕ್ಕೆ 2 ಮೈಲಿಗಳ ದೂರ ವಿರುವ ಬಿಂಗಿಯಲ್ಲಿ ಮಹಿಳೆಯೋರ್ವಳು ಕಬ್ಬಿಣದ ಅದಿರು ಟ್ರಕ್ಕಿಗೆ ಸಿಕ್ಕಿ ಜಜ್ಜಿ ಹೋಗಿ ಮೊನ್ನೆ ಸತ್ತಳು ಇದೇ ರೀತಿ ಇದೇ ಸ್ಥಳದಲ್ಲಿ 3 ವರ್ಷಗಳ ಹಿಂದೆ ಅವಳ ಗಂಡನು ಮರಣ ಹೊಂದಿದನು

ಮುಷ್ಕರ ನಿಲ್ಲುವುದಿಲ್ಲ

ಆಂಧ್ರ ಪ್ರದೇಶದ ಗ್ರಾಮಾಧಿಕಾರಿಯವರು ಪಟ್ಟುಹಿಡಿದಿರುವ ಮುಷ್ಕರವನ್ನು ಮುಂದುವರಿಸಬೇಕೆಂಬ ನಿರ್ಧಾರ ಮಾಡಿರುವರೆಂದು ಹೈದರಾಬಾದು ವಾರ್ತೆ. ಗ್ರಾಮಾಧಿಕಾರಿಗಳ ಹುದ್ದೆಯನ್ನು ವಂಶಾನುಗತವಾಗಿ ರಕ್ಷಿಸಬೇಕು ಇಲ್ಲವೆ ವೇತನ ಹೆಚ್ಚಿಸಬೇಕು ಎಂಬುದು ಅವರ ಬೇಡಿಕೆ

೦೦

ಉತ್ತರ ಪ್ರದೇಶದ ಶಾಸ್ಮೀಯಲ್ಲಿ ಮೊನ್ನೆ ಪಂ|| ನೆಹರು ಕಾಂಗ್ರೆಸಿನ ಚುನಾವಣೆ ಭಾಷಣಮಾಡುತ್ತಾ, ಸಹಕಾರ ವವಸಾಯ ಮಾತ್ರದಿಂದ ವ್ಯವಸಾಯ ಅಭಿವೃದ್ಧಿ ತೀವ್ರಗತಿಯಿಂದ ಆಗುವದು ಎಂದರು.

ಡಿ ಸುಬ್ಬಯ್ಯಾ ರಚ್ಚೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ನಾಳೆ ಬೆಳಿಗ್ಗೆ ಕಳಸ ಸ್ಥಾಪನೆ ಮತ್ತು ನವಗ್ರಹ ಹೋಮ. ಸಾಯಂಕಾಲ 6 ಗಂಟೆಗೆ ಅ|| ವಿ|| ಸ್ವರವಾರ್ತಿಯವರ ಹಾಡುಗಾರಿಕೆ ಪ್ರೊ || ಕೆ. ವೆಂಕಟಂಣ ಮುಪ್ಪಸ್ಸವರಿಂದ ವತ್ಸ ನಗರ್ ಎಂಬ ಬಗ್ಗೆ ಭಾಷಣ

ನಾಳೆಯ ಪಂಚಾಂಗ

ಅಸ್ಥಾನ ವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ
31 ದಶಮಿ ಆನೂರಾಧ

ವಿವಿಧ ವಿಷಯಗಳು

ಉತ್ತರ ಪ್ರದೇಶದ ಮಾಜಿ ಮುಖ್ಯ ಮಂತ್ರಿ ಡಾ|| ಸಂಪೂರ್ಣಾನಂದರವರು ಮೊನ್ನೆ ಲಕ್ನೋದಲ್ಲಿ ಹೇಳಿಕೆಯಿತ್ತು, ಅಷ್ಟಗ್ರಹ ಸಂಯೋಗ ವಿಷಯದಲ್ಲಿ ಪ್ರಧಾನಿ ನೆಹರೂರವರು ಹೇಳಿಕೆಯಿತ್ತಿರುವ ಕುರಿತು ಆತಂಕ ಪಡಬೇಕಾಗಿಲ್ಲವೆಂದು ನೆಹರೂರವರ ಅಭಿಪ್ರಾಯ ದಂಥ ಅಭಿಪ್ರಾಯಗಳು ಮನಸ್ಸಿನಲ್ಲಿ ಗೊಂದಲ ಹಾಗೂ ಹೇಡಿತನವನ್ನು ಉಂಟು ಮಾಡುವದು ಎಂದರು

ಜನರು ವಿವೇಚನೆಯನ್ನು ಹೊಂದಿ ಮತದಾನ ಮಾಡಬೇಕೆಂದು ಕೇಂದ್ರದಿಂದ ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಮೊನ್ನೆ ರಾಯಪುರದಲ್ಲಿ ತಿಳಿಸಿದರು.

ವಿದ್ಯಾಸು- ಕೇರಳ ಹಾಗೂ ಮೈಸೂರು ರಾಜ್ಯಗಳಿಗೆ ಹೆಚ್ಚು ಅಕ್ಕಿ ಕಳಿಸಲು ವಿಜಯವಾಡಾಕ್ಕೆ ಹೆಚ್ಚು ಪಾತ್ರಗಳನ್ನು ಗಳನ್ನು ಕಳಿಸುವಂತೆ ಆಂಧ್ರ ಪ್ರದೇಶ ಅಕ್ಕಿ ವರ್ತಕರ ಸಂಘ ವಾರ್ಥಿಸಿದೆ.

ರಾಷ್ಟ್ರದಲ್ಲಿ ಸಮಾಜವಾದವನ್ನು ಕಾಂಗ್ರೆಸು ಮಾತ್ರವೇ ತರಬಲ್ಲುದೆಂದು ಕೇಂದ್ರ ಸರ್ಕಾರದ ಮಾಜಿ ಹಣಕಾಸು ಮಂತ್ರಿ ಶ್ರೀ ಟಿ.ಟಿ ಕೃಷ್ಣಮಾಚಾರಿಯವರು ಮೊನ್ನೆ ಮದ್ರಾಸಿನಲ್ಲಿ ತಿಳಿಸಿದರು.

ಭಾರತ ಗಣರಾಜ್ಯದ ದಿನ ಬಿರಕ ನಗರದಲ್ಲಿ ಅಸಿಸ್ಟೆಂಟು ಇಂಡಿಯರ್ ಪಮಿಷನಲ್ ಅಟ್ಯಾಷೆ ಕಚೇರಿಯಲ್ಲಿ ಸಮಾರಂಭ ನಡೆದಾಗ ಕೆಲವು ನೇಪಾಳಿಯರು ಪ್ರದರ್ಶನ ಮಾಡಿದರು.

ಭಾರತ ಮತ್ತು ಚೀನ ಶಾಂತಿಯುತವಾಗಿ ತಮ್ಮ ಕಲಹ ಪರಿಹಾರ ಮಾಡಿಕೊಳ್ಳಬಹುದೆಂದು ಬರ್ಮಾ ಪ್ರಧಾನಿಯು ನು ರಂಗೂನಿನಲ್ಲಿ ನುಡಿದರು

ಭಾರತಕ್ಕೆ ಅಧಿಕೃತ ಭೇಟಿಕೊಡಲು ಮಾರ್ಚ್ 26 ರಂದು ಬರಲಿರುವ ಪ್ರಧಾನಿ ಟೆಂಕು ಅಬ್ದುಲ್ ರೆಹಮಾನ್ ರವರನ್ನು ದೆಹಲಿಗೆ ಆಗಮಿಸಿದರು

ವಾರ್ತಾತರಂಗ

1954 ರಲ್ಲಿ ಭಾರತ ರತ್ನ ಪ್ರಶಸ್ತಿ ಜಾರಿಗೆ ಬಂದಾರಭ್ಯ ಅದನ್ನು ಮೊದಲು ಪಡೆದವರು ಭಾರತದ ಅಧ್ಯಕ್ಷರು ಎಂಬುದಾಗಿ ಗೃಹಶಾಖೆಯ ಪ್ರಮುಖ ಕೋರ್ವರು ನವದೆಹಲಿಯಲ್ಲಿ ತಿಳಿಸಿದರು.

ಂ ಂ

ಸಿಂಹಳದ ಮಾಜಿ ಪ್ರಧಾನಿ ಬಂಡಾರನಾಯಕೆಯವರ ಕೊಲೆಗೆ ಸಂಬಂಧಿಸಿದಂತೆ ರಾಜಕೀಯ ವಿಷಯಗಳನ್ನು ಪರಿಶೀಲಿಸುವ ಸಮಿತಿಯಲ್ಲಿ ಭಾರತೀಯರು ಮತ್ತು ಈಜಿಪ್ಟಿನವರು ಸೇವೆ ಸಲ್ಲಿಸುವಂತೆ ಭಾರತ ಪ್ರಧಾನಿ ಪಂ || ನೆಹರು ಹಾಗೂ ಈಜಿಪ್ಟಿನ ಅಧ್ಯಕ್ಷ ನಾಸೆರ್‌ರಿಗೆ ಸಿಂಹಳದ ಪ್ರಧಾನಿ ಶ್ರೀಮತಿ ಬಂಡಾರ ನಾಯಕೆ ತಿಳಿಸಿದ್ದಾರೆ.

ಂ ಂ

1961 ರ ಏಪ್ರಿಲ್ 1 ರಂದ ಮೈಸೂರು ರಾಜ್ಯದಲ್ಲಿ 708 ಹೊಸ ಅಂಚೆ ಕಚೇರಿಗಳು ಸ್ಥಾಪಿತವಾಗಿವೆ.

ಂ ಂ

ಮೈಸೂರು ನಗರದ ಜೆ ಸಿ ಏ ಎಂ ವಿದ್ಯಾರ್ಥಿಗಳ ಮುಷ್ಕರ ಮುಂದುವರಿಯುತ್ತಿದೆ.

ಂ ಂ

ಭಾರತದ ಕಡೆಯ ವೈಸ್ರಾಯಿ ಆಗಿದ್ದ ಲಾರ್ಡ್ ಮೌಂಟ್‌ಬೇಟ್‌ರವರು ಲಂಡನ್ನಿನ ತಿಲಕ್ ಭವನವನ್ನು ಮೊನ್ನೆ ಅಂಧಭಗೊಳಿಸಿದರು.

ಂ ಂ

ನವ ದೆಹಲಿಯಲ್ಲಿ ನಡೆದ ಗಣರಾಜ್ಯ ಪೆರೇಡು ಮತ್ತು ಎರಡು ದಿವಸಗಳ ಜಾನಪದ ನೃತ್ಯಪ್ರದರ್ಶನದಿಂದ ಅದ ಧನಸಂಗ್ರಹ ರೂ 3 ಲಕ್ಷದ 65 ಸಹಸ್ರ.

ಂ ಂ

ಬೊಂಬಾಯಿ ನಲ್ಲಿ ಬ್ರಿಟಿಷ್ ಪ್ರಿನ್ಸ್ ಆಫ್ ವೇಲ್ಸ್ ಪ್ರತಿಮೆ ಇದ್ದ ಸ್ಥಳದಲ್ಲಿ ಡಾ|| ಅಂಬೇಡ್ಕರ ಜೀವಂತ ಆಕಾರದ ಕಂಚಿನ ಪ್ರತಿಮೆಯನ್ನು ಬೊಂಬಾಯಿನ ರಾಜ್ಯಪಾಲರಾದ ಶ್ರೀ ಶ್ರೀಪ್ರಕಾಶರು ಶುಕ್ರವಾರ ಪ್ರಕಾಶನ ಮಾಡಿದರು.

ಂ ಂ

ಕಾಶ್ಮೀರ ವಿಷಯ ವೇಲೆ ವಿವರಣೆ ಕೊಡಲು ಪಾಕಿಸ್ತಾನದ ವಿದ್ಯುತ್ತಿನ ಪ್ರತಿನಿಧಿಯವರಾದ ಶ್ರೀ ಯು ಎ ಭುಟ್ಟೋರವರು ಸಂಯುಕ್ತ ಸಂಸ್ಥಾನ ಗಣರಾಜ್ಯ ಬ್ರಿಟನ್, ಐರ್ಲೆಂಡ್ ಮತ್ತು ಫ್ರಾನ್ಸಾಗಳಿಗೆ 10 ದಿವಸಗಳ ವರಿಗೆ ಭೇಟಿಯಿತ್ತು, ಕರಾಚಿಗೆ ವಾಪಸಾದರು. ಆ ರಾಷ್ಟ್ರಗಳ ಸಹಾನುಭೂತಿ ತಮಗಿದೆ ಎಂದವರು ನುಡಿದರು.

ವುಡ್‌ಲ್ಯಾಂಡ್ಸ್

26—1—62 ರಿಂದ — ಅಮೋಘ ಆರಂಭ

ಪ್ರಮಾ (ಹಿಂದಿ) SHAMA

ಪಾತ್ರ-ಸಂಯೋಜನೆ, ನಿರ್ಮಾಣ, ನಿರ್ದೇಶನ : ಸಂಗೀತ : ಗುಲಾಂ ಮಹಮದ್

ಅಮೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಆಪೇರಾ ಚಿತ್ರ : ಮೈಥವ 5 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

SHAKTI SUDHA

A Superb Tonic



Ex[illegible]

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬರ್ಲಿ ನಡೆಯಲಿ

ಎಲ್ಲ ಸಿ ಸಿ ನೇವಲ್ ವಿಂಗ್ ಕೆಡೆಟ್ಟರ ಮಾಚ್ಛ್ ಪಾಸ್ಟ್

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ವಿಶೇಷ ಕನ್ನಡ ಪತ್ರಿಕೆ.

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಆಯುರ್ವೇದಿಕ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Publish[illegible] Proprietor, Dharma Prachara Nirata M. S. Krishn[illegible] Satyavadi Office, Chamarajapuram, Mysore 4.